ನಿಲ್ಲಿಸಬೇಕೆಂದು ಈ ಹಿಂದೆ ಕೂಡ ಹೇಳಿದ್ದೀರಿ. ಪುನಃ ಈಗ ನಾವು ಹಣವಿಲ್ಲದೇ ಕೆಲಸವನ್ನು ಪ್ರಾರಂಭ ಮಾಡಿದರೆ, ಮತ್ತೆ ಗುತ್ತಿಗೆದಾರರು ಆಫೀಸ್‌ಗಳ ಮುಂದೆ ಧರಣಾ ಮಾಡುವಂಥಾದ್ದು, ಪ್ರೊಟೆಸ್ಟ್ ಮಾಡುವಂಥಾದ್ದು ಮಾಡುತ್ತಾರೆ. ಆದುದರಿಂದ ಈ ವರ್ಷದ ಬಜೆಟ್‌ನಲ್ಲಿ ನಮಗೆ ಹಣ ಬಂದಾಗ ಅದನ್ನು ನೋಡಿಕೊಂಡು ಅಲ್ಲಿಗೆ ಸಹಾಯ ಮಾಡುವಂತಹ ಕೆಲಸವನ್ನು ಮಾಡುತ್ತೇವೆ, ಏಕೆಂದರೆ ಇದು ಅತ್ಯಂತ ದೊಡ್ಡದಾದ ಕಾಲುವೆ, ಮತ್ತೆ ಸುಮಾರು 120 ಕಿ.ಮೀ ಉದ್ದದ ಇರುವಂತಹ, ಮೈನರ್ ಇರಿಗೇಷನ್‌ನಲ್ಲಿ ದೊಡ್ಡ ಕಾಲುವೆಯಾದ ಕಾರಣ, ಇದಕ್ಕೆ ಎಷ್ಟರಮಟ್ಟಿಗೆ ಹಣವನ್ನು ಒದಗಿಸಬೇಕೆಂಬ ಬಗ್ಗೆ ಹಣದ ಲಭ್ಯತೆ ಮೇಲೆ, ಹಣವನ್ನು ಇದಕ್ಕೆ ಒದಗಿಸುತ್ತೇನೆ.

ಅಧ್ಯಕ್ಷರು :- ಈಗ ಪ್ರಶ್ನೋತ್ತರದ ವೇಳೆ ಮುಕ್ತಾಯವಾಯಿತು, ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಯನ್ನು ಮಾನ್ಯ ಡಿ.ಬಿ. ಚಂದ್ರೇಗೌಡರು ಮಂಡಿಸಬೇಕು.

1) (ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆ):- ಮಾನ್ಯ ಅಧ್ಯಕ್ಷರೇ ದಿನಾಂಕ 18-3-2003ರಂದು ಲಿಖಿತ ಮೂಲಕ ಉತ್ತರಿಸುವ 145 ಪ್ರಶ್ನೆಗಳ ಪೈಕಿ 104 ಪ್ರಶ್ನೆಗಳಿಗೆ ಮುಂದೆ ಮಂಡಿಸುತ್ತೇನೆ. ಅನುಬಂಧ - 1

ಅಧ್ಯಕ್ಷರು:- ಮಂಡಿಸಲಾಯಿತು.

2. ಪ್ರಕಟಣೆ

ವಿಷಯ:- ರಾಜ್ಯ ಮುಕ್ತ ವಿಶ್ವ ವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ನಾಮಕರಣ ಮಾಡುವ ಬಗ್ಗೆ

ಅಧ್ಯಕ್ಷರು:- ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ವಿಧಾನ ಸಭಾ ಸದಸ್ಯರಾದ ಶ್ರೀ ರಾಜುಗೌಡರು ಸಚಿವರಾದ ಪ್ರಯುಕ್ತ ತೆರವಾದ ಆ ಸ್ಥಾನಕ್ಕೆ ವಿಧಾನ ಸಭಾ ಸದಸ್ಯರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಅವಿರೋಧವಾಗಿ ಆಯ್ಕೆ ಆಗಿದ್ದಾರೆಂದು ಈ ಮೂಲಕ ತಿಳಿಸಲಾಗಿದೆ.

ಈಗ ಗಮನ ಸೆಳೆಯುವ ಸೂಚನೆಯನ್ನು ಮುಗಿಸೋಣ.

ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ) :- ಮಾನ್ಯ ಅಧ್ಯಕ್ಷರೇ, ಈಗ ಶೂನ್ಯ ವೇಳೆಯ ಬಗ್ಗೆ.

ಅಧ್ಯಕ್ಷರು:- ತಾವು ಏನು ವಿಷಯಗಳನ್ನು ಕಳುಹಿಸಿದ್ದೀರೋ, ಅದನ್ನು ಸಭೆಯಲ್ಲಿ ಪ್ರಸ್ತಾಪ ಮಾಡುವುದಿದ್ದರೆ, Don't expect any answers. ಅವರು ಉತ್ತರ ರೆಡಿ ಮಾಡಿರುವುದನ್ನು ಕಳುಹಿಸಿಲ್ಲ, ನಮಗೆ ಸರ್ಕಾರದವರು ಕಳುಹಿಸಬೇಕಲ್ಲಾ?

ಶ್ರೀ ಸಿ. ಬೈರೇಗೌಡ:- ಅವರು ಕಳುಹಿಸುವುದೇ ಇಲ್ಲ. ನಾನು ತಮ್ಮನ್ನು, 11ನೇ ತಾರೀಖಿನಂದು ಭೇಟಿಯಾಗಿದ್ದೇನೆ,

ಅಧ್ಯಕ್ಷರು:- ನೀವು ಶೂನ್ಯ ವೇಳೆಯಲ್ಲಿ ಉತ್ತರ ಬೇಕಾಗಿಲ್ಲದಿದ್ದರೆ, ಸಭೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿ. I have no objection.

ಶ್ರೀ ಸಿ. ಬೈರೇಗೌಡ:- ನಾವು ಪ್ರಸ್ತಾಪ ಮಾಡುತ್ತೇವೆ, ಅದಕ್ಕೆ ಸರ್ಕಾರದಿಂದಲೂ ಪ್ರತಿಕ್ರಿಯೆ ಬರಬೇಕಾಗುತ್ತದೆ.